O.S.379/2014
P.W.1

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ದಿನಾಂಕಃ23.01.2018.**

ಪಾಟೀ ಸವಾಲು ಶ್ರೀ ಜಿ.ವಿ.ವಿ. ಪ್ರತಿವಾದಿ ಪರ ವಕೀಲರಿಂದ ಃ

ನಂಜೇಗೌಡ ಉಃ ಪಾಪಣ್ಣ 1 ನೇ ಪ್ರತಿವಾದಿಯ ತಂದೆ. ನಂಜೇಗೌಡ ಉಃ ಪಾಪಣ್ಣ ರವರಿಗೆ ದಾವಾ ಸ್ವತ್ತು ಹೇಗೆ ಬಂದಿದೆ ಎಂದು ಗೊತ್ತಿಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಾನು ದಾಖಲೆಗಳನ್ನು ಪರಿಶೀಲನೆ ಮಾಡಿಲ್ಲ. ನಾನು ಕೆಂಪಮ್ಮನನ್ನು ನಂಜೇಗೌಡ ರವರಿಗೆ ಆಸ್ತಿ ಹೇಗೆ ಬಂದಿದೆ ಎಂದು ಕೇಳಿಲ್ಲ. ಸರ್ವೆ ನಂ.182 ರಲ್ಲಿ ಎಷ್ಟು ಎಕರೆ ಇದೆ ಎಂದು ಗೊತ್ತಿಲ್ಲ. ಎಷ್ಟು ಪೋಡುಗಳಾಗಿವೆ ಎಂದು ಗೊತ್ತಿಲ್ಲ, ನಂಜೇಗೌಡ ರವರಿಗೆ 182/2 ರಲ್ಲಿ ಸ್ವತ್ತು ಬಂದಿತ್ತು. ಸರ್ವೆ ನಂ.182/2 ರಲ್ಲಿ ಒಟ್ಟು ಎಷ್ಟು ಎಕರೆ ಇದೆ ಎಂದು ಗೊತ್ತಿಲ್ಲ. ನನಗೆ 26 ಗುಂಟೆ ಆರ್ ಟಿ ಸಿ ಯಲ್ಲಿ ಬಂದಿದೆ. ಆಕಾರ ಬಂದ್ ಪ್ರಕಾರ 26 ಗುಂಟೆ ಜಮೀನು ಇದೆ ಎಂದು ತಿಳಿಯಿತು. ಕೆಂಪಮ್ಮ 1 ಎಕರ 19 ಗುಂಟೆಯನ್ನು ಬರೆಸಿಕೊಂಡಿದ್ದರು.ಕೆಂಪಮ್ಮನಿಗೆ ಖಾತೆ ಆಗಿರಲಿಲ್ಲ. ಕೆಂಪಮ್ಮ 1971 ರಲ್ಲಿ ಕ್ರಯಪತ್ರ ಬರೆಸಿಕೊಂಡಿದ್ದಾರೆ ಖಾತೆಯು ನಂಜೇಗೌಡ ಉಃ ಪಾಪಣ್ಣ ರವರ ಹೆಸರಿನಲ್ಲಿ ಇತ್ತು.

ಕೆಂಪಮ್ಮ 26 ಗುಂಟೆ ಬರೆದುಕೊಡಬೇಕೆಂದು ಯಾವುದೇ ಕ್ರಮ ಜರಗಿಸಿಲ್ಲ. 1971-72 ರಲ್ಲಿ ಖಾತೆ ಮಾಡುವ ಬಗ್ಗೆ ಕೆಂಪಮ್ಮ ರವರ ಕೋರಿಕೆಯನ್ನು ವಜಾ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ನಂಜೇಗೌಡ ಉಃ ಪಾಪಣ್ಣ ರವರನ್ನು ವಿಸ್ತೀರ್ಣವನ್ನು ತಿದ್ದುಪಡಿ ಮಾಡಿಕೊಡುವಂತೆ ಕೇಳಿಲ್ಲ. ನನ್ನ ಗಂಡ ಮತ್ತು ಕೆಂಪಮ್ಮನ ತಾಯಿ ನಂಜಮ್ಮ ರವರು ನಂಜೇಗೌಡ ರವರನ್ನು ತಿದ್ದುಪಡಿ ಮಾಡಿಕೊಡುವಂತೆ ಕೇಳಿದ್ದರು. 1975-76 ರಲ್ಲಿ ನನ್ನ ಅತ್ತೆ ನಂಜಮ್ಮ ಕೇಳುತ್ತಿದ್ದರು. ಈ ಸಬಂದ ಯಾವುದೇ ನೋಟೀಸು ನೀಡಿಲ್ಲ ಹಾಗೂ ದಾವೆಯನ್ನು ಸಲ್ಲಿಸಿಲ್ಲ.

ಸ್ಥಳದದಿಲ್ಲಿ ವಿಸ್ತೀರ್ಣ ಕಡಿಮೆ ಇದೆ ಎಂದು ಕೆಂಪಮ್ಮ ಸಲ್ಲಿಸಿದ್ದ ಖಾತೆ ವಜಾ ಆಗಿದೆ. ಸದರಿ 26 ಗುನಂಟೆ ಜಮೀನಿನ ಚಕ್ ಬಂದಿ ಪೂರ್ವಕ್ಕೆ-ರಾಮೆಗೌಡ, ಪಶ್ಚಿಮಕ್ಕೆ-ಕುಮಾರ ಮತ್ತು ನಂಜೇಗೌಡ, ಉತ್ತರಕ್ಕೆ-ನಂಜೇಗೌಡ. ಮೇಲ್ಕಂಡ ಇಬ್ಬರೂ ನಂಜೇಗೌಡ ರವರು ಒಬ್ಬರೆ ಆಗಿರುತ್ತಾರೆ.

ಕೆಂಪಮ್ಮ ರವರು ಬರೆಸಿಕೊಂಡಿದ್ದ 1 ಎಕರೆ 19 ಗುಂಟೆಗೆ ಚಕ್ ಬಂದಿ ಪೂರ್ವಕ್ಕೆ ನೆನಪಿಲ್ಲ. ಪಶ್ಚಿಮಕ್ಕೆ ಗೊತ್ತಿಲ್ಲ. ಉತ್ತರಕ್ಕೆ-ದಾರಿ. ದಕ್ಷಿಣಕ್ಕೆ ಗೊತ್ತಿಲ್ಲ. ಕೆಂಪಮ್ಮನ ಕ್ರಯಪತ್ರದ ಚಕ್ ಬಂದಿಯನ್ನು ನಾನು ತಿಳಿದುಕೊಂಡಿಲ್ಲ. ಪ್ರತಿವಾದಿ 2 ರವರಿಗೆ ಸದರಿ ನಂಜೇಗೌಡ ಮಾವ, ಪ್ರತಿವಾದಿ 3 ರವರಿಗೆ ತಾತ. ಕೆಂಪಮ್ಮ ದಿನಾಂಕಃ04.06.1991 ರಲ್ಲಿ ತೀರಿಕೊಂಡಿದ್ದಾರೆ. ತೀರಿಕೊಳ್ಳುವ ಕಾಲಕ್ಕೆ ಕೆಂಪಮ್ಮ ನನ್ನ ಮನೆಯಲ್ಲಿದ್ದರು. ನನ್ನ ಅತ್ತೆ ಸಾಯುವ ಮೊದಲು 1 ತಿಂಗಳ ಮುಂಚೆ ವಿಲ್ ಬರೆದಿರುವ ಬಗ್ಗೆ ನನಗೆ ತಿಳಿಸಿದರು. ಸದರಿ ಕೆಂಪಮ್ಮ ಸಾಯುವ 6 ತಿಂಗಳ ಮೊದಲು ವಿಲ್ ಮತ್ತು ಕ್ರಯಪತ್ರಗಳನ್ನು ನನಗೆ ಕೊಟ್ಟರು. ಆ ಸಮಯಕ್ಕೆ ನಂಜೇಗೌಡ ಉಃ ಪಾಪಣ್ಣ ರವರ ಹೆಸರಿಗೆ ಖಾತೆ ಇತ್ತು. ಆದರೆ ಎಷ್ಟು ವಿಸ್ತೀರ್ಣಕ್ಕೆ

ಇತ್ತು ಎಂದು ಗೊತ್ತಿಲ್ಲ. ನನ್ನ ಅತ್ತೆ ತೀರಿಕೊಂಡ ನಂತರ ಖಾತೆ ಬದಲಾವಣೆಗೆ ಅರ್ಜಿ ನೀಡಲು ನಾನು ಹೋಗಿಲ್ಲ. ಖಾತೆ ಬದಲಾವಣೆಗೆ ಅರ್ಜಿ ನೀಡಲು ಯಾವುದೆ ತೊಂದರೆ ಇರಲಿಲ್ಲ.

ಸರ್ವೆ ನಂ.183/1 ಯಾರಿಗೆ ಸಂಬಂಧಿದ್ದು ಎಂದು ಗೊತ್ತಿಲ್ಲ. ನಿಂಗೇಗೌಡ ರವರ ಮಗ ನಂಜೇಗೌಡ ಯಾರು ಎಂದು ಗೊತ್ತಿಲ್ಲ. ನಿಶಾನೆ ಪಿ-3 ನ್ನು ನನ್ನ ಗಂಡನ ಅಕ್ಕನ ಮಗ ತೆಗೆದುಕೊಂಡಿದ್ದಾರೆ. ಸರ್ವೆ ನಂ.182/2 ರ ಖಾತೆ ಮಾಡಲು ವಜಾ ಆದ ದಿನದಿಂದ ನಂಜೇಗೌಡ ರವರ ಹಸೆರಿನಲ್ಲಿ ಪಹಣಿ ದಾಖಲಾಗಿದೆ ಎಂದರೆ ಸರಿ.

ವಿಲ್ ಬರೆದುಕೊಟ್ಟ ನಂತರ ನಂಜೇಗೌಡ ರವರನ್ನು ವಿಸ್ತೀರ್ಣವನ್ನು ಬದಲಾವಣೆ ಮಾಡಿಕೊಡುವಂತೆ ಕೇಳಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸ.ಇ.ಎ.ಒ.ಸ.ಮಾ,**

*(ಎಸ್.ಚೆನ್ನಸ್ವಾಮಿ)*
**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಚನ್ನರಾಯಪಟ್ಟಣ**